# “ಶ್ರೀ ಜಯತೀರ್ಥರ ಗ್ರಂಥದರ್ಶನ”

## ಶ್ರೀ ಜಯತೀರ್ಥರ ಗ್ರಂಥಗಳ ಬಗ್ಗೆ
## ಶ್ರೀ ಪ್ರಸನ್ನ ಶ್ರೀನಿವಾಸದಾಸರು ಬರೆದ ದೇವರನಾಮ

ಪ್ರವ್ರಜ್ಯ ಕುಲ ಶಿರೋರತ್ನ ಜಯತೀರ್ಥರ
ಸುವ್ರತ ಜಾಂಘ್ರಿಯಲಿ ಶರಣಾದೆ ಸತತ
ಸರ್ವೇಷ್ಟದಾತರು ವಿಜ್ಞಾನ ಬೋಧಕರು
ಮಧ್ವೇಷ್ಟ ಶ್ರೀರಮಾಪತಿಗೆ ಪ್ರಿಯತಮರು ।ಪ।

ನರಹರಿಯ ಮಹಾದುರ್ಗೆಯ ಕುರಿತು ತಪಸ್ ಆಚರಿಸಿ
ವರವ ಪಡೆದಿಹರು ಈ ಜಯತೀರ್ಥ ಆರ್ಯ
ಬರೆವುದಕೆ ಲೇಖನವು ಅಡಿಕೆಯು
ಅರದೂರ ದುರ್ಗೆಯು ಕೊಟ್ಟಿಹಳು ಇವರ್ಗೆ ।೧।

ಎರಗೋಳದಲ್ಲಿದ್ದು ಶ್ರೀಮದಾಚಾರ್ಯರ
ಪರಸುಖಪ್ರದ ಮೂಲಗ್ರಂಥಗಳ ಟೀಕಾ
ಬರೆದಿಹರು ಅನುಪಮ ಉತ್ತಮ ರೀತಿಯಲಿ
ಭರದಿ ಓದುವವರೇ ಬಲ್ಲರು ಮಹಿಮೆ ।೨।

ಶ್ರೀಮಧ್ವ ಕೃತವು ಶ್ರೀ ಬ್ರಹ್ಮ ಸೂತ್ರ ಭಾಷ್ಯವು
ಆ ಮೂಲಗ್ರಂಥವು ಎರಡು ಸಾವಿರವು
ಆ ಮಹಾ ಭಾಷ್ಯಕ್ಕೆ ಟೀಕೆ ಅಷ್ಟ ಸಹಸ್ರವು
ಅಮ್ಮಮ್ಮ ಏನೆಂಬೆ ಈ ಮಹಾಕಾರ್ಯ ।೩।

ಅನುವ್ಯಾಖ್ಯಾನದ ನಾಲಕ್ಕು ಸಾವಿರ
ಘನತರ ಗ್ರಂಥಕ್ಕೆ ಜಯತೀರ್ಥರ
ಜ್ಞಾನಪ್ರದ ಅಜ್ಞಾನಗಿರಿ ವಜ್ರ ಟೀಕೆಯ
ಗ್ರಂಥ ಇಪ್ಪತ್ತೆಂಟು ಸಾವಿರ ಸಂಖ್ಯಾ । ೪ ।

ಈ ನುಡಿ ಬರೆವಾಗ ಬಿಂದುಮಾಧವ ಪೇಳ್ದ
ಘನ್ನ ಶುಭತರ ಮಧ್ವ ವಿಜಯದಲ್ಲಿ
ಅನುವ್ಯಾಖ್ಯಾನದ ಟೀಕಾ ಸುಧಾ ಎಂದು
ಶ್ರೀನಾರಾಯಣಾಚಾರ್ಯ ಸೂಚಿಸಿಹರೆಂದು । ೫ ।

ತತ್ತ್ವಸಂಖ್ಯಾನಕ್ಕೂ ಕಥಾಲಕ್ಷಣಕ್ಕೂ
ತತ್ತ್ವವಿವೇಕಕ್ಕೂ ಋಗ್ಭಾಷ್ಯಕ್ಕೂ
ತತ್ತ್ವನಿರ್ಣಯಕ್ಕೂ ಪ್ರಮಾಣಲಕ್ಷಣಕ್ಕೂ
ತತ್ತ್ವೋದ್ಯೋತಕ್ಕೂ ಕರ್ಮ ನಿರ್ಣಯಕ್ಕೂ । ೬ ।

ಮಾಯಾವಾದ ಉಪಾದಿ ಖಂಡನಗಳಿಗೂ
ಮಿಥ್ಯಾತ್ವಾನುಮಾನ ಖಂಡನಕ್ಕೂ
ನ್ಯಾಯ ವಿವರಣಕ್ಕೂ ಗೀತಾ ಭಾಷ್ಯಕ್ಕೂ
ನ್ಯಾಯ ತೇಜೋಜ್ವಲ ಗೀತಾ ತಾತ್ಪರ್ಯಕ್ಕೂ । ೭ ।

ಷಟ್ಪ್ರಶ್ನ ಈಶಾವಾಸ್ಯ ಭಾಷ್ಯಗಳಿಗೂ
ಅಷ್ಟಾದಶ ಈ ಮೂಲಕ ಗ್ರಂಥಗಳಿಗೆ
ಪಟು ಪಟೀಯಸವಾಗಿ ಟೀಕೆಯಾ ಬರೆದಿಹರು
ಇಷ್ಟೇ ಅಲ್ಲದೆ ಇನ್ನೂ ನಾಲ್ಕು ರಚಿಸಿಹರು । ೮ ।

ಪ್ರತ್ಯಕ್ಷ ಅನುಮಾನ ಆಗಮ ಪ್ರಮಾಣಗಳ
ರೀತಿ ಲಕ್ಷಣ ಪೇಳ್ವ ಪ್ರಮಾಣ ಪದ್ಧತಿಯು
ಮಾಧವನ ಸರ್ವೋತ್ತಮ ಜಗತ್ಸತ್ಯತ್ವ
ಇಂಥಾದ್ದು ಸಾಧಿಸುವ ವಾದಾವಳಿಯು ।೯।

ತಂತ್ರಸಾರ ಪಾಂಚರಾತ್ರಾಗಮಾನುಸರಿಸಿ
ಪದ್ಯಮಾಲಾ ನಾಮ ಗ್ರಂಥದಲ್ಲಿ
ಶ್ರೀಧರ ಸರ್ವೋತ್ತಮಾರ್ಚನೆ ಬಗೆ ಪೇಳಿದರು
ಶತಾಪರಾಧ ಸ್ತೋತ್ರವು ಮಾಡಿಹರು ।೧೦।

ದಿಗ್ವಿಜಯ ಮಾಡಿ ಸಜ್ಜನರ ಉದ್ಧರಿಸುತ್ತಾ
ದುರ್ವಿದ್ಯಾ ದುರ್ಮತಗಳನ್ನ ಛೇದಿಸುತ
ಸುವೈದಿಕ ಮಧ್ವಸಿದ್ಧಾಂತ ಸ್ಥಾಪಿಸುತ
ಭುವಿಯಲಿ ಪ್ರಖ್ಯಾತರಾದರು ಜಯಾರ್ಯ ।೧೧।

ಒಂದು ಸಮಯದಿ ವಿದ್ಯಾರಣ್ಯರು ಶ್ರೀಮಧ್ವ
ಗ್ರಂಥ ಓದಿ ನೋಡಿ ಅರ್ಥವಾಗದೆಲೆ
ಗ್ರಂಥಕ್ಕೆ ಜಯರಾಯರು ಬರೆದ ಟೀಕೆಯೆ
ಓದಲು ಅರ್ಥವು ವಿಷದವಾಯ್ತು ।೧೨।

ಪೂರ್ವಾಪರ ಸಂಗತಿ ಮತ್ತು ವಾಕ್ಯಾರ್ಥ
ಸರ್ವ ಪ್ರಕಾರದಲೂ ಉತ್ತಮವಾಗಿಹುದು
ಸರ್ವಜ್ಞ ಮುನಿಗಳ ಗ್ರಂಥದ ಸರಿಯಾದ
ಭಾವವ ವಿವರಿಸುವುದೆಂದು ಹೇಳಿದರು ।೧೩।

ಈ ರೀತಿ ವಿದ್ಯಾರಣ್ಯರು ಕೊಂಡಾಡಿ
ಪುರಿ ರಾಜಬೀದಿಯಲಿ ಆನೆ ಅಂಬಾರಿ
ಮೆರವಣಿಗೆ ಮಾಡಿಸಿ ಜಯಘೋಷ ಮಾಡುತ್ತಾ
ಮರ್ಯಾದೆ ಮಾಡಿದರು ವಿಜಯನಗರದಲಿ । ೧೪ ।

ಮಧ್ವಗ್ರಂಥಗಳನ್ನು ಜಯಾರ್ಯ ಬರೆದಿರುವ
ಉತ್ತಮ ಟೀಕೆಗಳ ಬಲು ಶ್ಲಾಘಿಸುತ್ತ
ವಿದ್ಯಾರಣ್ಯರು ನಮಸ್ಕಾರ ಮಾಡಿದರು
ಎಂದು ಇತಿಹಾಸವ ಸುಜನರು ಪೇಳುವರು । ೧೫ ।

ಸ್ವಮತ ಪರಮತ ವಿದ್ವಜ್ಜನರಿಂದ
ಈ ಮಹಾ ಮಹಿಮ ಟೀಕಾಚಾರ್ಯ ಆರ್ಯ
ಈ ಮಹಿಮೆಯಲ್ಲಿ ಪ್ರಖ್ಯಾತ ಪೂಜಿತರಾಗಿ
ನಮ್ಮ ಗುರುಕ್ಷೇತ್ರ ಮಳಖೇಡ ಸೇರಿದರು । ೧೬ ।

ಮಳಖೇಡ ಕ್ಷೇತ್ರದಲ್ಲಿ ಕಾಗಿನೀ ನದಿತೀರ
ಮಾಲೋಲಪ್ರಿಯ ಅಕ್ಷೋಭ್ಯರ ವೃಂದಾವನ
ಶೀಲತಮ ಜಯರಾಯ ಅಲ್ಲಿಯೇ ನಿಂತರು
ಅಳವೇ ವರ್ಣಿಸಲು ಈ ಮಹಾತ್ಮರ ಮಹಿಮೆ । ೧೭ ।

ಹನ್ನೊಂದು ತೊಂಭತ್ತು ಶಕ ವಿಭವ ಆಷಾಢ
ಕೃಷ್ಣಾ ಪಂಚಮಿ ಪುಣ್ಯದಿನದಲ್ಲಿ ಇವರು
ತನ್ನ ಸೇವಾ ವಿಷ್ಣು ಮಧ್ವರಿಗೆ ಪೂರೈಸಿ
ಶ್ರೀ ನಾರಾಯಣನ ಪಾದ ಸೇರಿದರು । ೧೮ ।

ಮತ್ತೊಂದು ಅಂಶದಲಿ ವೃಂದಾವನದಲ್ಲಿ
ಇದ್ದು ಸೇವಿಸುವವರ್ಗೆ ವಾಂಛಾತವೀಯುತ್ತ
ಮಧ್ವಸ್ಥ ಶ್ರೀಹರಿಯ ಧ್ಯಾನಿಸುತ ತಮ್ಮ ಗುರು
ಬದಿಯಲ್ಲಿ ಕುಳಿತಿಹರು ಸ್ಮರಿಸೆ ಪಾಲಿಪರು । ೧೯ ।

ವನರುಹಾಸನ ಪಿತ **ಶ್ರೀಪ್ರಸನ್ನ ಶ್ರೀನಿವಾಸ**
ಪೂರ್ಣಪ್ರಜ್ಞರ ಹೃತ್‍ಸ್ಥ ಜನ್ಮಾದಿಕರ್ತ
ಗುಣಪೂರ್ಣ ನಿರ್ದೋಷ ಶ್ರೀಯಃಪತಿಗೆ ಪ್ರಿಯ
ಘನಕರುಣಿ ಜಯತೀರ್ಥಗುರು ನಮೋ ಪಾಹಿ । ೨೦ ।